

ರಚ್ಚೆ ಹಿಡಿದು ಕುಳಿತ.

'ಓಹ್ ಅಭಿನಂದನೆಗಳು ಹಾಗಾದ್ರೆ' ಎಂದು ಪೂಜ್ಯಾಯ ಗಹಗಹಿಸಿ ನಕ್ಕು ಪ್ರತಿಕ್ರಿಯಿಸಿದ. ಹಾಗೇ ಮಾತು ಮುಂದುವರೆಸಿದ: 'ಅವರ್‍ಯಾರೇ ಇರ್ಲಿ, ಸಾವಿಗೆ ಕಾರಣ ಕೊಡ್ಲೇಬೇಕು. ಕಾರಣವೇ ಇಲ್ದೇ ಸಾವೇಕೆ ನಿನ್ನ ಮೂಸೀತು? ನಿಂಗನ್ನಿಬಿಟ್ರೆ ಸತ್ತೇ ಹೋಗೋಕೆ ಸಾಧ್ಯವೇನು?' ತರ್ಕ ಮುಂದಿಟ್ಟ ಪೂಜ್ಯಾಯ.

'ಕಾರಣವೇ? ಅಂಥದ್ದೇನಿಲ್ವಲ್ಲ! ಕಾರಣ ಕೊಡ್ದೇ ನೆಮ್ದಿಯಾಗಿ ಸಾಯಂಗೂ ಇಲ್ವೇ?' ರಥಾಯಚನ ಮನಸಿನಿಂದ ಸಾವು ಕಾಲ್ಕೀಳುತ್ತಿತ್ತು. ಪೂಜ್ಯಾಯ ಕೂಡ ಇದನ್ನ ಬಹಳ ಸೂಕ್ಷ್ಮವಾಗೇ ಗಮನಿಸಿ, ಗೆಳೆಯನೊಳಗಿನ ಸಾವಿನ ವೈರಾಗ್ಯದ ಕೋಟೆ ಕಳಚಿ ಬೀಳುತ್ತಿರುವುದಕ್ಕೆ ಸಮಾಧಾನಗೊಂಡ. ಬರೋ ಹಾದಿಯಲ್ಲಿ ಹೆಣವನ್ನೋ ಸ್ಮಶಾನವನ್ನೋ ನೋಡಿ, ದಾಟಿ ಬಂದು ಬಿಟ್ಟಿದ್ದಾನೆ. ಹಾಗಾಗಿ ಸ್ಮಶಾನ ವೈರಾಗ್ಯ ತಾಕಿಸಿಕೊಂಡಿದ್ದನೇನೋ ಅಂದುಕೊಂಡ ಪೂಜ್ಯಾಯ ರಥಾಯಚನ ಜೊತೆ ನಾಲ್ಕು ಹೆಜ್ಜೆ ಸಾಗಿ ಕಲೀಮನ ಟೀಯಂಗಡಿಯಲ್ಲಿ ಕುಳಿತು, 'ಲೋ ಕಲ್ಲೂ, ಎರ್ಡು ಖಡಕ್ ಚಾಯ್ ತಾರೋ' ಎಂದು ಆಜ್ಞಾಪಿಸುತ್ತಾನೆ. ಅಲ್ಲಿ ಚಾಯ್‌ಪೆ ಚರ್ಚಾ ಆರಂಭವಾಗುತ್ತದೆ. ವಿನಾಕಾರಣ ಸಿಗುವ ಪ್ರೀತಿ ಒಮ್ಮೊಮ್ಮೆ ಸಕಾರಣವಾಗಿ ಬರುವ ಸಾವನ್ನೂ ಗದರಿಸಿ ಓಡಿಸಿರುತ್ತೆ ಅನ್ನೋ ಅರ್ಥದ ತಮಿಳಿನ ಹಾಡೊಂದನ್ನು ಎಲ್ಲರ ಕಿವಿಗಳೂ ಅಲ್ಲಿ ಸ್ವೀಕರಿಸುತ್ತಿದ್ದವು. ಆದರೆ, ಹಾಡಿನ ಭಾವ ತೀವ್ರತೆ ಅಲ್ಲಿದ್ದ ಯಾರ್‍ಯಾರ ಎದೆಗೆ ನುಗ್ಗಿತೋ? ಯಾರ್‍ಯಾರ ಹೃದಯಕ್ಕೆ ಶಕ್ತಿ ತುಂಬಿತೋ? ಅಥವಾ ಏನೂ ಆಗದೇ ಈ ಕಿವಿಯಿಂದ ಆ ಕಿವಿಗೆ ದಾಟಿ ನಿರರ್ಥಕ ರೂಪ ತಾಳಿತೋ? ಒಂದೂ ಅರ್ಥವಾಗದೇ ಈಶಾನ್ಯ ಮತ್ತು ವಾಯುವ್ಯದತ್ತ ಗೊಂದಲಕ್ಕೆ ಬಿದ್ದು ಗಾಳಿ ಚಲಿಸುತ್ತಿತ್ತು.

ಗಾಳಿ ಹೀಗೆ ಚಲಿಸಿದಾಗಲೆಲ್ಲ ಅಜಂತಾ ಅದೆಲ್ಲಿರುತ್ತಾಳೋ ಓಡೋಡಿ ಬರುತ್ತಾಳೆ. ಹಾಗೆ ಬರುವವಳ ಕೈ ಯಾವತ್ತೂ ತುಂಬಿಕೊಂಡೇ ಇರುತ್ತೆ; ಕಾವ್ಯದ ಬಳೆಗಳ ಸದ್ದು ಇದ್ದೇ ಇರುತ್ತೆ. ಬಂದವಳೇ ರೇಡಿಯೊ ಎದೆಗೆ ಕೈಹಾಕಿ ನವಿರಾಗಿ ತಿರುಚಿ ಸದ್ದು ಕಡಿಮೆಗೊಳಿಸಿ ಹೇಳಿದಳು: 'ಕಟೀಲಿನ ವಿಲ್ಸನ್ ಏನು ಕೆತ್ತಿದ್ದಾನೆ ಕೇಳ್ರೋ...'

ಹಸಿದ ಮುದುಕಿ
ಶಿಲುಬೆ ಮುರಿದು ಒಲೆಗಿಟ್ಟಳು
ಅಕ್ಕಿಯಲ್ಲಿ ಅವಿತಿದ್ದ ಕ್ರಿಸ್ತ
ಅನ್ನದಲ್ಲಿ ಪ್ರತ್ಯಕ್ಷನಾದ

ಅಜಂತಾ ಪದ್ಯ ಹೇಳಿದ್ದಳಷ್ಟೇ, ಕಲೀಮ ಪಾತ್ರೆ ಬಡಿದು 'ಊಟ ತಯಾರಿದೆ' ಎಂದು ಕೂಗುಹಾಕಿದ. ಕಲೀಮನ ಟೀಯಂಗಡಿಯಲ್ಲಿ ಕ್ರಿಸ್ತ ಅನ್ನವಾಗಿ ಪ್ರತ್ಯಕ್ಷನಾದಂತೆಯೇ ಭಾಸವಾಯಿತು ಅಜಂತಾಗೆ. ತುಸು ದೂರದಲ್ಲೇ ನಿಂತಿದ್ದ ಶೋಭಿತೆಯನ್ನು ಕೂಗಿ ಕರೆದಳು ಅಜಂತಾ,

'ಬಾ ಹತ್ತಿರಕ್ಕೆ'

ಶೋಭಿತೆ ಅಜಂತಾಳ ಕೂಗು ಕೇಳಿಸಿಕೊಂಡು ಬಂದು ನಿಂತವಳೇ, ಕೈಬೆರಳ ತುದಿಯಲ್ಲೇ ಲೆಕ್ಕ ಹಾಕುತ್ತಾ, 'ಈ ಆರು ರಾಶಿಯವರಿಗೆ ಭಾರಿ ಅದೃಷ್ಟ ಕಾದಿದೆ. ರಾಜಯೋಗ ಶುರುವಾಗಿ ಗಜಕೇಸರಿ ತುಂಬ್ಕೊಂಡು ಸುರಿಯೋ ಟೈಮಿದು... ನಿಂದ್ಯಾವ್ದೇ ರಾಶಿ?'

ಮೊದಲಿಂದಲೂ ಶೋಭಿತೆಗೆ ಜ್ಯೋತಿಷ್ಯದ ಚುಂಗು ಹಿಡಿದು ನಡೆವ ಚಟ. ಎಲ್ಲಿದ್ದರೂ ನಿಂತರೂ ಮಲಗಿದರೂ ಕುಂತರೂ ರಾಶಿರಾಶಿ ಲೆಕ್ಕಾಚಾರ ಹಾಕುತ್ತಲೇ ಇರುತ್ತಾಳೆ. 'ತಿರುಕನೂ ಕುಬೇರನಾಗ್ತಾನೆ ಕಣೇ ಅಜಂತಾ' ಅಂದಾಗಲಂತೂ ಬಿದ್ದು ಬಿದ್ದು ನಕ್ಕಿದ್ದ ಅಜಂತಾ ರಥಾಯಚನ ಮೇಲೂ ಪೂಜ್ಯಾಯನ ಮೇಲೂ ಕಣ್ಣು ಹಾಕಿ ಅಳೆದಿದ್ದಳು; ಇವರಲ್ಲಿ ಸದ್ಯಕ್ಕೆ ತಿರುಕನ್ಯಾರು? ಎಂಬಂತೆ. ಅತ್ತೆ ಮನೆಗೆ ಕಳಿಸಿ ಬೇಕಂತಲೇ ರುಬ್ಬಿಸಿದಂತೆ ದೃಶ್ಯ ನೆನೆಸಿಕೊಂಡು ರಥಾಯಚ ಮತ್ತು ಪೂಜ್ಯಾಯರ ಮೇಲೆ ಕರುಣಾಜನಕ ದೃಷ್ಟಿಬೀರಿ ಮುಖದ ಒಂದು ಕಡೆಯಿಂದ ನಗುತ್ತಿದ್ದಳು ಅಜಂತಾ. ಕ್ಷಣಬಿಟ್ಟು ಶೋಭಿತೆಗೆ ಪುಟ್ಟ ಪೆಟ್ಟು ನೀಡುವವಳಂತೆ ಎದ್ದು ಕಾಲು ಚಾಚಿ ಕುಳಿತು ಸಂಭಾಳಿಸಿಕೊಳ್ಳುತ್ತಲೇ ಕೇಳಿದಳು:

'ನಿಂದ್ಯಾವಾಗೇ ರಾಜ್ಯೋಗ?'

'ಆದಾಗ ಆಗುತ್ತೆ ಬಿಡೇ... ನಿಂದು ಮುಗೀಲಿ ಮೊದ್ಲು... ನಿಂದಾದ್ಮೇಲೇ ನಂದು ಅನ್ಸತ್ತೆ. ನಿಂದೇ ಮೊದ್ಲಿರ್ಲಿ' ಎಂದು ಮುಖ ತಿವಿದು ಹೇಳಿ ಶೋಭಿತೆ ತಾನೂ ಕುಳಿತುಕೊಂಡಳು. ಇಬ್ಬರ ಕಾಲ್ಬೆನುಗಳು ಬಿದ್ದ ಬಿಸಿಲಿಗೆ ಫಳಫಳ ಹೊಳೆದು ಏನೋ ಅಪರೂಪಕ್ಕೆ ಸಿಕ್ಕವರಂತೆ ಫುಲ್‌ಫುಲ್ ಮಾತಾಡಿಕೊಳ್ತಿದ್ದವು. ಅಜಂತಾ–ಶೋಭಿತೆ ನಡುವಿನ ಮದುವೆ ಕುರಿತ ಚರ್ಚೆಗೆ ಒಂದರೆಗಳಿಗೆ ರಥಾಯಚ ಮತ್ತು ಪೂಜ್ಯಾಯ ಕಿವಿ ಅರಳಿಸಿದ್ದರಷ್ಟೇ. ಕಲೀಮ ಅಷ್ಟರಲ್ಲಿ ಮತ್ತೆ ಚಾ ತಂದಿಟ್ಟಿದ್ದ.

'ಮದ್ವೇ ಅಂತಾದ್ರೆ ನಿಮ್ಮಂಥೋರಿಗೇ ಆಗ್ಬೇಕ್ ನೋಡಪ್ಪ. ಏನ್ ಚಂದಾ, ಏನ್ ಮೈಗಂಧಾ, ಏನ್ ಮಾತಿನ್ ಅಂದಾ...'– ಇದ್ದಕ್ಕಿದ್ದ ಹಾಗೆ ಪ್ರತ್ಯಕ್ಷನಾಗಿದ್ದ ಸತ್ಯಧರ್ಮ ಧರ್ಮದ ಮಾತಾಡಲು ಹೋಗಿ ಬೆಣೆ ಸಿಗಿಸಿಕೊಂಡ ಮಂಗನಂತಾದ.

'ಕೊಲ್ಲೂರ್ ಲಾಡ್ಜಿಗೆ ಮ್ಯಾನೇಜರ್ ಬೇಕಂತೆ. ಅಲ್ಲಾದ್ರೂ ಹೋಗಿ ಉದ್ಧಾರವಾಗೋ